**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ನ್ಯಾಯಾಲಯ, ಪಾವಗಡ**

**ಸಿ.ಸಿ.1241/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ತಿಪ್ಪೇಸ್ವಾಮಿ | ಚಾ ಸಾ- 2 |
| ತಂದೆಯ ಹೆಸರು | - | ಮಾರಣ್ಣ | ಫ್ರಾ ಸಾ -13 |
| ವಯಸ್ಸು | - | 52 ವರ್ಷ | |
| ಉದ್ಯೋಗ | - | ಕೂಲಿ | |
| ವಾಸ ಸ್ಥಳ | - | ತಿಪ್ಪಗಾನಹಳ್ಳಿ | |

ದಿನಾಂಕಃ 27.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:</u>**

ಸಾಕ್ಷಿಗೆ ನಿಪಿ-9 ಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 4 ವರುಷಗಳ ಹಿಂದೆ ತಿಪ್ಪಗಾನಹಳ್ಳಿ ಯ ಚಾಸಾ-1 ರವರ ಮನೆಯ ಹತ್ತಿರ ಮಾಡಿರುತ್ತೇನೆ. ಸದರಿ ಸಹಿಯನ್ನು ಪೋಲಿಸರು ಮಹಜರ್ ಗೆ ಬಂದ ಸಮಯದಲ್ಲಿ ಮಾಡಿರುತ್ತೇನೆ. ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ವಿಚಾರಕ್ಕೆ ಪೊಲೀಸರು ಮಹಜರ್ ಗೆ ಬಂದಿದ್ದರು. ಸದರಿ ಮಹಜರ್ ನ ಸಮಯದಲ್ಲಿ ಚಾಸಾ-1,3 ಮತ್ತು 4 ಇದ್ದರು. ಸದರಿ ಮಹಜರ್ ಮದ್ಯಾಹ್ನ ಸುಮಾರು 12.00 ರಿಂದ 1.30 ಗಂಟೆ ತನಕ ನಡೆಯಿತು. ಸದರಿ ಮಹಜರ್ ನ ಸಮಯದಲ್ಲಿ ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ</u>**

ದಿ.11.08.2020 ರಂದು ಪೊಲೀಸರು ಮಹಜರ್ ಗೆ ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಒಂದು ಸ್ಟೀಲ್ ಬೀಗ ಮತ್ತು ಕಬ್ಬಿಣದ ತುರಾಮಣೆಯನ್ನು ವಶಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹಜರ್ ನ ಸಮಯದಲ್ಲಿ ಒಂದು ಸ್ಟೀಲ್ ಬೀಗ ಮತ್ತು ಕಬ್ಬಿಣದ ತುರಾಮಣೆಯನ್ನು ವಶಪಡಿಸಿಕೊಂಡ ವಿಚಾರ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ ಪಿ.ಹೆಚ್.ಎಸ್. ವಕೀಲರಿಂದಃ</u>**

ದಿನಾಂಕಃ 11.08.2020 ರಂದು ಪೊಲೀಸರುನವರು ಮಹಜರ್ ವಿಚಾರವಾಗಿ ನನಗೆ ಯಾವುದೇ ನೋಟೀಸ್ ನ್ನು ನೀಡಿರಲಿಲ್ಲ ಎಂದರೆ ಸರಿ. ಚಾಸಾ-1 ನನಗೆ ಪರಿಚಯಸ್ಥರು ಎಂದರೆ ಸರಿ. ನಾನು ಚಾಸಾ-1 ರವರ ಕೋರಿಕೆಯ ಮೇರೆಗೆ ಸದರಿ ಮಹಜರ್ ಗೆ ಸಹಿ ಮಾಡಿರುತ್ತೇನೆಂದರೆ ಸರಿ. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.